4

ನಿನ್ನ ಮೊದಲ ಮುತ್ತು,
ನನ್ನ ಅಧರಗಳ ಮೇಲೆ ಬರೆದ ಸುಂದರ
ಕವಿತೆ,
ವಸಂತದ ನವಿರು ಸೂರ್ಯಕಿರಣ
ಆ ಗಳಿಗೆ ನನ್ನಾತ್ಮ ಹಾಡತೊಡಗಿತು
ಭರವಸೆ ಕನಸುಗಳ ಕಾರವಾನ
ಹೊರಟಿತು
ಇನ್ನು 'ನಾವು' ಎಂಬುದಿಲ್ಲ
ಅಲ್ಲವೆ?



4

ನೀನು:
ಸುಂದರವಾದ, ಬೆಡಗಿನ ಕಪ್ಪು ರಾತ್ರಿ
ದಟ್ಟ, ಘನ ಮೋಡಗಳು ಹಾಡುವ
ನೋವಿನ ಗೀತೆ
ಕ್ಷಿತಿಜದಂಚಿನ ಬೆಳಕು ನಿನ್ನ
ಕಂಗಳಲ್ಲಿ
ಸಮುದ್ರದಾಳದಲ್ಲಿಯ, ವಿಸ್ತಾರ ಆಗ
ಸದ ಗಾಢ ಮೌನ ನಿನ್ನಾಳದಲಿ
ನಾನು ಕರಗಿ ಹೋಗುವೆನು
ಆ ನಿಶ್ಯಬ್ದದಲಿ, ಬೆಚ್ಚನೆಯ
ಪ್ರೇಮದ ಅಗಾಧತೆಯಲಿ

ಚಿತ್ರಗಳು: ವಾಗೀಶ ಹೆಗಡೆ